ಕರ್ನಾಟಕ ಸರ್ಕಾರ

ಸಂ:ಬಿಡಿಸ್:ಎಎಲ್ಎನ್:(ಪೂ)ಎಸ್ಆರ್:(ಕೃಹೋ):105/07-08

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು, ದಿನಾಂಕ:18-12-2008.

## ಅಧಿಕೃತ ಜ್ಞಾಪನ

ವಿಷಯ:- ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಅಮಾನಿಭೈರತಿ ಖಾನೆ ಗ್ರಾಮದ ಸ.ನಂ.1/5 ರಲ್ಲಿ 0-36 ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ವಿ.ಎ.ಪಿಂಟೋ ಬಿನ್ ಪಿಂಟೋ, ನಂ.534, ಹೆಚ್.ಎ.ಎಲ್.2ನೇ ಹಂತ, ಇಂದಿರಾನಗರ, ಬೆಂಗಳೂರು-38ರವರು ಸಲ್ಲಿಸಿರುವ ಅರ್ಜಿ ದಿನಾಂಕ:01-08-2007

ಉಲ್ಲೇಖ:-
1. ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 7 ಎಲ್‌ಜಿಪಿ 95 ದಿನಾಂಕ: 7-6-1999.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಡಿ:56:ಎಲ್‌ಜಿಪಿ/2008 ದಿನಾಂಕ:10-9-08 ಮತ್ತು 24-9-2008.
3. ತಹಶೀಲ್ದಾರ್,ಬೆಂಗಳೂರು ಪೂರ್ವ ತಾಲ್ಲೂಕು, ರವರ ವರದಿ ಸಂಖ್ಯೆ ಎಎಲ್ಎನ್:ಎಸ್ಆರ್:(ಹೋ)39/07-08 ದಿನಾಂಕ: 16-08-2007
4. ಭೂ ಪರಿವರ್ತನಾ ಶುಲ್ಕ ರೂ.49,005-00, ಹಾಗೂ ಪೋಡಿ ಶುಲ್ಕ ರೂ.55-00 ಒಟ್ಟು ರೂ. 49,060-00 ಗಳನ್ನು ಚಲನ್ ನಂಬರ್- ದಿ: 31-12-2007 ರಂದು ಎಸ್.ಬಿ.ಎಂ. ರಾಮಮೂರ್ತಿನಗರ ಶಾಖೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.
5. ಏಕಗವಾಕ್ಷಿ ಸಮಿತಿ ಸಭೆಯ ನಡವಳಿ ದಿನಾಂಕ: 29-09-2007

:: 0 ::

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95(2), 95(4) ಮತ್ತು 95(7) ರ ಷರತ್ತುಗಳು, ಹಾಗೂ ಷರತ್ತುಗಳಿಗೊಳಪಡಿಸಿ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು 1994 ರ ನಿಯಮ 107(1) ರಂತೆ ಎಕರೆ ಒಂದಕ್ಕೆ ರೂ.54,450-00 (ರೂಪಾಯಿಗಳು ಐವತ್ತನಾಲ್ಕು ಸಾವಿರದ ನಾಲ್ಕು ನೂರ ಐವತ್ತು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ(4) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ, ಅರ್ಜಿದಾರರಾದ ಶ್ರೀ ವಿ.ಎ.ಪಿಂಟೋ ಬಿನ್ ಪಿಂಟೋ, ನಂ.534, ಹೆಚ್.ಎ.ಎಲ್.2ನೇ ಹಂತ, ಇಂದಿರಾನಗರ, ಬೆಂಗಳೂರು-38 ರವರ ಅರ್ಜಿಯನ್ನು ಪರಿಗಣಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಅಮಾನಿಭೈರತಿ ಖಾನೆ ಗ್ರಾಮದ ಸ.ನಂ.1/5 ರಲ್ಲಿ 0-36 ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

1. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರ ಅಂದರೆ, **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ./(ಸ್ಥಳೀಯ ಯೋಜನಾ ಪ್ರಾಧಿಕಾರ)/ ಬಿ.ಎಂ.ಐ.ಸಿ.ಎ.ಪಿ.ಎ/ ಮಾಲಿನ್ಯ ನಿಯಂತ್ರಣಾ ಮಂಡಳಿ** ರವರಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದಾರನಿಗೆ ಯಾವುದೇ ಹಕ್ಕನ್ನು ನೀಡುವುದಿಲ್ಲ.

2. ಈ ಭೂ ಪರಿವರ್ತಿತ ಜಮೀನನ್ನು **ವಾಸದ** ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೇ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

3. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ./(ಸ್ಥಳೀಯ ಯೋಜನಾ ಪ್ರಾಧಿಕಾರ)/ ಬಿ.ಎಂ.ಐ.ಸಿ.ಎ.ಪಿ.ಎ/ ಪ್ರಾಧಿಕಾರದಿಂದ** ಅನುಮೋದಿಸಿ ಕೊಂಡು ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್/ಕಟ್ಟಡ ನಕ್ಷೆಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು.

---2.

R

Original Received on 30/12/08

Received
(Nasir, Leg Dept)
30/12/08

4. ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಉದ್ಯಾನವನ, ಸಿ.ಎ.ನಿವೇಶನ ಖಾಲಿ ಜಾಗ, ಇತ್ಯಾದಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ/ಬಿ.ಎಂ.ಆರ್.ಡಿ.ಎ./(ಸ್ಥಳೀಯ ಯೋಜನಾ ಪ್ರಾಧಿಕಾರ)/ ಬಿ.ಎಂ.ಐ.ಸಿ.ಎ.ಪಿ.ಎ/ ಪ್ರಾಧಿಕಾರದಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗೂ ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

**5. ಸಂಬಂಧಪಟ್ಟ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೆ ನಿವೇಶನಗಳನ್ನು/ಕಟ್ಟಡಗಳನ್ನು ಸಂಬಂಧಪಟ್ಟ ನೊಂದಣಾಧಿಕಾರಿಗಳಿಂದ / ಉಪನೊಂದಣಾಧಿಕಾರಿಗಳಿಂದ ನೊಂದಾವಣೆ ಮಾಡತಕ್ಕದ್ದಲ್ಲ, ಖಾತೆದಾರರು ಒಂದು ವೇಳೆ ಭೂ ಪರಿವರ್ತನೆ ಮಂಜೂರು ಮಾಡಿರುವ ಜಮೀನಿನ ಪೂರ್ಣ ವಿಸ್ತೀರ್ಣವನ್ನು ಮಾರಾಟ ಮಾಡಲು ಉದ್ದೇಶಿಸಿದಲ್ಲಿ ಈ ಆದೇಶ ಅಡ್ಡಿ ಬರುವುದಿಲ್ಲ.**

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರೀಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ಕುಡಿಯುವ ನೀರು ರಸ್ತೆ, ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ ನೈರ್ಮಲೀಕರಣ ಹಾಗೂ ಭದ್ರತೆಗಳ ಉದ್ದೇಶದಿಂದ ಈ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

**7. ಈ ಜಮೀನಿಗೆ ತಾಕು ಪೋಟ್ ಖರಾಬ್ ಜಮೀನು ಇದ್ದಲ್ಲಿ, ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಅಮಾನಿಭೈರತಿ ಖಾನೆ ಗ್ರಾಮದ ಸ.ನಂ.1/5 ರಲ್ಲಿ 0-03 ಗುಂಟೆ ಖರಾಬ್ ಇದ್ದು, ಆಕಾರ್‌ಬಂದ್ ದಾಖಲೆಯಂತೆ ಬಿ ಖರಾಬ್‌ನಲ್ಲಿ ಬರುವ ಕಾರಣ ಇದನ್ನು ಭೂ ಪರಿವರ್ತಿಸಿರುವುದಿಲ್ಲ. ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸಲಾಗಿದೆ. ಈ ಬಿ ಖರಾಬ್‌ನ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ತಹಶೀಲ್ದಾರ್‌ರವರು ಈ ಬಾಬ್ತು ಆರ್.ಟಿ.ಸಿ.ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.**

8. ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ. ಪಿ.1/7(11)67, ದಿನಾಂಕ: 01-01-1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾಯ್ದಿರಿಸಬೇಕು ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

**9. ಭೂ ಪರಿವರ್ತನೆ ಮಂಜೂರಿ ಯಾವ ಉದ್ದೇಶಕ್ಕೆ ಆಗಿರುತ್ತದೆಯೋ ಅದೇ ಉದ್ದೇಶಕ್ಕೆ ಈ ದಿನದಿಂದ ಎರಡು ವರ್ಷಗಳ ಒಳಗಾಗಿ ಉಪಯೋಗಿಸತಕ್ಕದ್ದು.**

10. ಈ ಭೂ ಪರಿವರ್ತನಾ ಜಮೀನಿನಲ್ಲಿ **ಸ್ಥಾಪಿಸಲಾಗುವ ವಾಸದ ಘಟಕಗಳು ಹೊರದೂಡುವ ಹೊಗೆ, ಅನಿಲ, ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ವಾಸದ** ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ **ವಾಸದ** ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪರಿಸರ ಇಲಾಖೆಯ ಅನುಮತಿ ಹೊಂದಿರತಕ್ಕದ್ದು.

11. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ / ರಿಟ್ ಅರ್ಜಿ/ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

12. ಪ್ರಸ್ತಾವಿತ ಜಮೀನಿನ ಬಗ್ಗೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

13. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂ ಪರಿವರ್ತನೆ ಆದೇಶವನ್ನು ಯಾವುದೇ ಸೂಚನೆ ನೀಡದೇ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964 ರ ಕಲಂ 96 ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೇ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು. ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೇದಾರರಿಂದ ವಸೂಲಿ ಮಾಡಲಾಗುವುದು.

---3.

**ಷೆಡ್ಯೂಲ್ ವಿವರ**

ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಅಮಾನಿಬೈರತಿ ಖಾನೆ ಗ್ರಾಮದ ಸ.ನಂ.1/5 ರಲ್ಲಿ 0-36 ಗುಂಟೆ (ಮೂವತ್ತಾರು ಗುಂಟೆ ವಿಸ್ತೀರ್ಣಕ್ಕೆ ಮಾತ್ರ) ವಿಸ್ತೀರ್ಣದ ಭೂ ಪರಿವರ್ತಿತ ಜಮೀನಿನ ಚಕ್ಕುಬಂದಿ:

**-: ಚೆಕ್ಕುಬಂದಿ :-**

| | |
|---|---|
| ಪೂರ್ವಕ್ಕೆ : | ರಸ್ತೆ |
| ಪಶ್ಚಿಮಕ್ಕೆ : | ಹೆಣ್ಣೂರು ಗ್ರಾಮದ ಗಡಿ |
| ಉತ್ತರಕ್ಕೆ : | ಸ.ನಂ.1/5ರ ಉಳಿಕೆ ಜಮೀನು |
| ದಕ್ಷಿಣಕ್ಕೆ : | ಹೆಣ್ಣೂರು ಗ್ರಾಮದ ಗಡಿ |

ಸಹಿ/-
(ಹೆಚ್.ರಾಮಾಂಜನೇಯ)
ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,ಬೆಂಗಳೂರು.

**ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ/ ಮಾಹಿತಿಗಾಗಿ ಕೆಳಕಂಡವರಿಗೆ ಕಳುಹಿಸಲಾಗಿದೆ.**

1. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ರವರಿಗೆ ಮೂಲ ಕಡತ ಹಾಗೂ ಚಲನ್‌ದೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್.ಟಿ.ಸಿ.ಯಲ್ಲಿ ಕೂಡಲೇ ನಮೂದಿಸತಕ್ಕದ್ದು. ಮತ್ತು ಈ ಜಮೀನಿಗೆ ಖಾತೇದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
2. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ರಸ್ತೆ, ಬೆಂಗಳೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಪೋಡಿಯಂ ಬ್ಲಾಕ್,ಬೆಂಗಳೂರು. ರವರಿಗೆ
4. ಭೂ ಮಾಪನ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ,ಬೆಂಗಳೂರು. ಇವರಿಗೆ ಆರ್.ಟಿ.ಸಿ ಹಾಗೂ ನಕ್ಷೆಯ ಪ್ರತಿಯೊಂದಿಗೆ ಕಳುಹಿಸುತ್ತಾ ಭೂ ಪರಿವರ್ತನಾ ಪೋಡಿ ಕಾರ್ಯವನ್ನು ಜರೂರಾಗಿ ಪೂರೈಸಲು ಸೂಚಿಸಿದೆ.
5. ಉಪನೋಂದಣಾಧಿಕಾರಿಗಳು, ಕೆ.ಆರ್.ಪುರಂ / ಮಹದೇವಪುರ, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ
6. ಅರ್ಜಿದಾರರಾದ ಶ್ರೀ ವಿ.ಎ.ಪಿಂಟೋ ಬಿನ್ ಪಿಂಟೋ, ನಂ.534, ಹೆಚ್.ಎ.ಎಲ್.2ನೇ ಹಂತ, ಇಂದಿರಾನಗರ, ಬೆಂಗಳೂರು-38 ರವರಿಗೆ ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿದೆ.
7. ಹೆಚ್ಚಿನ ಪ್ರತಿ.

ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ,ಬೆಂಗಳೂರು.